


(6ನೇ ಪುಟದಿಂದ)
ದೇಹದ ಆಕಾರಕ್ಕೆ ಹೋಲಿಸಿದರೆ ಉದ್ದವೇ ಅನ್ನಿಸುತ್ತದೆ. ಕಾಲು, ಕಾಲ್ಬೆರಳು ಮತ್ತು ನಖಗಳು ಉದ್ದವಾಗಿರುವುದರಿಂದ ತೇಲು ಸಸ್ಯಗಳ ಮೇಲೆ ದೇಹದ ಭಾರವನ್ನು ಸಮನಾಗಿ ಹಂಚಿ ನಡೆಯುವ ಇದನ್ನು ಇಂಗ್ಲಿಷ್‌ನಲ್ಲಿ 'ಫೆಸೆಂಟ್ ಟೇಲ್ಡ್ ಜಕಾನಾ' ಅಥವಾ 'ಲಿಲ್ಲಿ ಟ್ರಾಟರ್' ಎಂದು ಕರೆಯುತ್ತಾರೆ. ಜಕಾನಿಡೆ ಗುಂಪಿಗೆ ಸೇರಿದ ಇದರ ವೈಜ್ಞಾನಿಕ ಹೆಸರು 'ಹೈಡ್ರೋಫಾಸಿಯಾನಸ್ ಚಿರುರ್‌ಗಸ್'.

ಪಶ್ಚಿಮ ಘಟ್ಟದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುವ ಈ ಹಕ್ಕಿ ಕೈಗಾದ ಸುತ್ತಮುತ್ತಲ ಗ್ರಾಮಗಳ ಜೌಗಿನಲ್ಲಿ ಸದಾ ಸಿಗುತ್ತದೆ. ಕಾರವಾರ ತಾಲ್ಲೂಕಿನ ಹಳಗ್, ಉಳಗ್, ದೇವಳಮಕ್ಕಿ, ಪೈಲ್‌ವಾಡ್ ಮತ್ತು ಕಾರವಾರದ ಕೋಡಿ ಭಾಗದಲ್ಲಿ ಮಳೆ ಬಿದ್ದೊಡನೆ ಕಾಣಸಿಗುತ್ತದೆ. ತೇಲು ಸಸ್ಯಗಳ ಮೇಲೆ ಮೊಟ್ಟೆ ಇಟ್ಟು ಮರಿ ಮಾಡುವ ಇದರ ಸಂತಾನೋತ್ಪತ್ತಿಯ ಕಾಲ ಜೂನ್‌ನಿಂದ–ಅಕ್ಟೋಬರ್‌ವರೆಗೆ. ಮೊಟ್ಟೆ ಕಂದುಬಣ್ಣದಿಂದ ಕೂಡಿದ್ದು ವಾಟರ್ ಆ್ಯಪಲ್‌ನ ವಿನ್ಯಾಸವನ್ನು ಹೋಲುತ್ತದೆ.

ಇವುಗಳ ಮರಿಗಳಿಗೆ ಅಪಾಯದ ಅರಿವಾದೊಡನೆ ಅಥವಾ ತಂದೆಯಿಂದ ಸಣ್ಣ ಎಚ್ಚರಿಕೆಯ ಸೂಚನೆ ಸಿಕ್ಕ ಕೂಡಲೇ ಕೊಳದಾವರೆ, ಜೊಂಡು ಮುಂತಾದ ಜಲ ಸಸ್ಯಗಳಿಂದ ಆವೃತ್ತವಾದ ಸ್ಥಳದಲ್ಲಿ ದೇಹವನ್ನು ಪೂರ್ತಿ ಮುಳುಗಿಸಿ. ಕೇವಲ ಕೊಕ್ಕನ್ನಷ್ಟೇ ನೀರಿನಿಂದ ಹೊರಚಾಚಿ ಅವಿತುಕೊಳ್ಳುತ್ತದೆ! ಅಪ್ಪಂದಿರು ಹತ್ತಿರ ಇದ್ದರೆ ಅವರ ರೆಕ್ಕೆಯ ತೆಕ್ಕೆಯಲ್ಲಿ ಅವಿತುಕೊಳ್ಳುವುದೂ ಇದೆ.

ಅದೇನು 'ಅಪ್ಪಂದಿರು..' ಅಂದಿರಾ? ಕುತೂಹಲಕರ ಅಂಶವೆಂದರೆ ಈ ಹಕ್ಕಿಗಳಲ್ಲಿ ಬಹು ಪತಿತ್ವ ಇರೋದು! ಅದೇ ಈ ಹಕ್ಕಿಗಳ ಸ್ಪೆಶಾಲಿಟಿ! ಒಂದಕ್ಕಿಂತ ಹೆಚ್ಚು ಗಂಡು ಹಕ್ಕಿಗಳನ್ನು ಕೂಡುವ ಜಕಾನಗಳು ದ್ರೌಪದಿಯ ವಂಶಸ್ಥರು! ಹೆಣ್ಣು ಹಕ್ಕಿ ಗಾತ್ರದಲ್ಲೂ ಗಂಡಿಗಿಂತ ಸ್ವಲ್ಪ ದೊಡ್ಡದೇ. ಹೆಣ್ಣು ಹಕ್ಕಿಗಳು ವಾಸಿಸುವ, ಓಡಾಡುವ ಸ್ಥಳದ ವಿಸ್ತಾರವೂ ದೊಡ್ಡದೇ. ಗಂಡು ಹಕ್ಕಿನ ಗಡಿ ಚಿಕ್ಕದು.

ಹೆಣ್ಣಿನೊಂದಿಗೆ ಕೂಡುವ ಗಂಡು ಮೊಟ್ಟೆ ಇಡಲು ಪ್ರೇರೇಪಿಸುತ್ತದೆ. ಮೊಟ್ಟೆ ಇಟ್ಟನಂತರ ಕಾವು ಕೊಟ್ಟು ಮರಿ ಮಾಡುವ, ಸಾಕುವ ಜವಾಬ್ದಾರಿ ಗಂಡಿನದ್ದು. (ಆದ್ದರಿಂದಲೇ ಇರಬೇಕು ಮರಿಗಳಿಗೆ ಅಪಾಯ ಬಂದಾಗ ಅಪ್ಪನ ಬಳಿಗೇ ಹಾರುತ್ತವೆ.) ಹೆಣ್ಣು ಹಕ್ಕಿ ಒಂದು ಗೂಡಿನಲ್ಲಿ ಮೊಟ್ಟೆ ಇಟ್ಟ ಬಳಿಕ ಇತರ 'ಬಾಯ್‌ಫ್ರೆಂಡ್'ಗಳನ್ನು ಹುಡುಕಿಕೊಂಡು ಬೇರೆಡೆ ಓಡಾಡುತ್ತದೆ. ಹೀಗೆ ಹೆಣ್ಣು ಹಕ್ಕಿಯದ್ದು ವರ್ಷ ಪೂರ್ತಿ ಸಂತಾನೋತ್ಪತ್ತಿಯ ಕೆಲಸ. ಕೆಲವೊಮ್ಮೆ ಹೆಣ್ಣು ಹಕ್ಕಿ ತನ್ನ ಹಳೆಯ ಗೂಡಿಗೆ 'ಫ್ಲೈಯಿಂಗ್ ವಿಸಿಟ್' ಕೊಟ್ಟು ಹಳೆಯ ಗಂಡ ಮತ್ತು ಮರಿಗಳನ್ನು ಸಂಧಿಸುವುದಿದೆ.

ಹೊಳೆಯುವ ಬಂಗಾರದ ಬಣ್ಣದ ಕುತ್ತಿಗೆ, ಕಡುಗಪ್ಪಿನಿಂದ ಕೂಡಿದ ನೆತ್ತಿ, ಬೆನ್ನು, ಬಾಲ ಮತ್ತು ಎದೆ! ಕಣ್ಣಿನ ಸುತ್ತ, ತಲೆ ಮತ್ತು ಕೆಳ ಕುತ್ತಿಗೆ ಅಚ್ಚ ಬಿಳಿಯ ಬಣ್ಣದ್ದು. ದೇಹಕ್ಕಿಂತ ಉದ್ದನಾದ ಕಪ್ಪು ಗರಿಯ ಬಾಲ ಕೇವಲ ಸಂತಾನೋತ್ಪತ್ತಿಯ ಸಮಯದಲ್ಲಿ ಕಂಡುಬರುತ್ತದೆ. ನೇರವಾಗಿ ಆಕಾಶಕ್ಕೆ ಚಿಮ್ಮಿ ಹಾರುತ್ತದೆಯಾದರೂ ಸದ್ದಿಲ್ಲದೆ ಸಣ್ಣ ಗುಂಪಿನಲ್ಲಿ, ಜಲಸಸ್ಯಗಳಲ್ಲಿ, ನಿಧಾನವಾಗಿ ನಡೆಯುವುದೇ ಹೆಚ್ಚು. ಸಸ್ಯಗಳ ಗೆಡ್ಡೆ, ಬೀಜ, ಕೀಟ, ಮೃದ್ವಂಗಿಗಳೇ ಇವುಗಳ ಆಹಾರ. ಕೀ... ಕೀ... ಟೈ... ಟಯಾಂ... ಟಯಾಂ ಎಂಬ ಮಧುರವಾದ ಕೂಗು ಇಂಪಾಗಿದೆ. ಈ ಹಕ್ಕಿಗಳ ಮರಿಗಳು ಹಾವು ಮತ್ತು ಹದ್ದುಗಳಿಗೆ ಆಹಾರವಾಗುವ ಸಾಧ್ಯತೆ ಹೆಚ್ಚಿರುತ್ತದೆ.

ದೇವತೆಗಳಂತೆ ಸ್ವಚ್ಛಂದವಾಗಿ ಜೀವಿಸುವುದರಿಂದಲೇ ಇದನ್ನು ದೇವನಕ್ಕಿ ಎಂದು ಕರೆಯುತ್ತಿರಬಹುದೆ? ದೇವರೇ ಬಲ್ಲ!